ಕೊಳವೆ ಬಾವಿ ಮಂಜೂರಾತಿ

5110 (5843); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಗೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಮೂಂಜೂರು ಮಾಡಲಾಗಿದೆ;

ಆ) ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು;

ಇ) ಎಷ್ಟು ಕೊಳವೆ ಬಾವಿಗಳಿಗೆ ಮೋಟಾರು ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ;

ಈ) ಕೊರೆಯಲು ಬಾಕಿಯಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ಮೋಟಾರು ಮತ್ತು ವಿದ್ಯುತ್ ಸಂಪರ್ಕಕ್ಕೆ ಕಾಲಮಿತಿ ಏನಾದರೂ ಹಾಕಿಕೊಳ್ಳಲಾಗಿದೆಯೇ?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ)

ವರ್ಷ	ಮಂಜೂರಾದ ಕೊಳವೆ ಬಾವಿಗಳು	
	ಡಾ॥ ಬಿ.ಆರ್.ಅಂ.ಅ.ನಿ	ಕ.ಮ.ವಾ.ಪ.ಪಂ.ಅ.ನಿ
2012–13	339	219
2013–14	223	148
2014–15	364	259
ಒಟ್ಟು	**926**	**626**

ಆ)

ನಿಗಮಗಳ ಹೆಸರು	ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆ
ಡಾ॥ ಬಿ.ಆರ್.ಅಂ.ಅ.ನಿ	423
ಕ.ಮ.ವಾ.ಪ.ಪಂ.ಅ.ನಿ	313

ಇ)

ನಿಗಮಗಳ ಹೆಸರು	ಮೋಟಾರು ಅಳವಡಿಸಿದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ಕಲ್ಪಿಸಲಾದ ಕೊಳವೆ ಬಾವಿಗಳ ಸಂಖ್ಯೆ
ಡಾ॥ ಬಿ.ಆರ್.ಅಂ.ಅ.ನಿ	271	122
ಕ.ಮ.ವಾ.ಪ.ಪಂ.ಅ.ನಿ	197	118

ಈ)

ನಿಗಮಗಳ ಹೆಸರು	ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆ
ಡಾ॥ ಬಿ.ಆರ್.ಅಂ.ಅ.ನಿ	503
ಕ.ಮ.ವಾ.ಪ.ಪಂ.ಅ.ನಿ	313

ಕೊರೆಯಲಾಗಿರುವ ಕೊಳವೆ ಬಾವಿಗಳಿಗೆ ಪಂಪ್, ಮೋಟಾರು ಸರಬರಾಜು ಮಾಡಲು ಅಧಿಕೃತ ಗುತ್ತಿಗೆದಾರರಿಗೆ ಈಗಾಗಲೇ ಕಾರ್ಯಾದೇಶ ನೀಡಲಾಗಿದ್ದು, ಪಂಪ್‌ಸೆಟ್‌ಗಳನ್ನು ತ್ವರಿತವಾಗಿ ಸರಬರಾಜು ಮಾಡುವುದಲ್ಲದೇ ಕೊಳವೆ ಬಾವಿಗಳನ್ನು ವಿದ್ಯುದ್ದೀಕರಣಗೊಳಿಸಲು ಬಾವಿ ಕೊರೆದ 15 ದಿನಗಳೊಳಗಾಗಿ ಫಲಾನುಭವಿಯ ಹೆಸರನ್ನು ಎಸ್ಕಾಂನಲ್ಲಿ ಆನ್‌ಲೈನ್ ಮುಖಾಂತರ ನೊಂದಣಿ ಮಾಡಿಸಿ, ವೈ.ಎಮ್.ಡಿ/ಎಮ್.ಎಸ್.ಡಿ ಹಣ ತುಂಬಲಾಗುತ್ತಿದೆ. ಹಾಗೂ ಪ್ರತಿ ಘಟಕಕ್ಕೆ ರೂ. 0.50 ಲಕ್ಷಗಳನ್ನು

ವಿದ್ಯುದ್ದೀಕರಣಕ್ಕಾಗಿ ವೆಚ್ಚಕ್ಕಾಗಿ ಎಸ್ಕಾಂ ಕಂಪನಿಗಳಿಗೆ ನೀಡಲಾಗುತ್ತಿದೆ. ಅದರಂತೆ ವಿದ್ಯುದ್ದೀಕರಣಗೊಳಿಸುವ ಕಾಮಗಾರಿ ಎಸ್ಕಾಂ ಹಂತದಲ್ಲಿ ಪ್ರಗತಿಯಲ್ಲಿದೆ.

ಡಾ॥ ಬಿ.ಆರ್. ಅಂಬೇಡ್ಕರ್ ನಿಗಮದಿಂದ ನೀಡುವ ಸಾಲ

5111 (5844); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಭಾಲ್ಕಿ ತಾಲ್ಲೂಕಿನಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ನಿಗಮದಿಂದ ನೇರ ಸಾಲ ಹೊರತುಪಡಿಸಿ ಉಳಿದ ಸಾಲದ ಅರ್ಜಿಗಳನ್ನು ಬ್ಯಾಂಕಿಗೆ ಕಳುಹಿಸುತ್ತಿರುವುದು ನಿಜವೇ;

ಆ) ಬ್ಯಾಂಕುಗಳು ಫಲಾನುಭವಿಗಳಿಗೆ ಸಾಲ ಮಂಜೂರು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಅಂತಹ ಬ್ಯಾಂಕುಗಳ ವಿರುದ್ಧ ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ) ಹೌದು

ಆ) ಬಂದಿದೆ.

ಇ) ಮಂಜೂರಾತಿ ನೀಡಲು ವಿಳಂಬ ಮಾಡುತ್ತಿರುವ ಶಾಖಾ ವ್ಯವಸ್ಥಾಪಕರಿಗೆ ಲೀಡ್ ಬ್ಯಾಂಕ್ ವ್ಯವಸ್ಥಾಪಕರ ಮುಖಾಂತರ ಸೂಕ್ತ ನಿರ್ದೇಶನ ನೀಡಿ, ಸಂಬಂಧಪಟ್ಟ ಬ್ಯಾಂಕುಗಳಿಂದ ಸಾಲ ಮಂಜೂರಾತಿ ಮಾಡಿಸಲಾಗುತ್ತಿದೆ.